**ಕರ್ನಾಟಕ ಸರ್ಕಾರ**
**ಸಹಕಾರ ಚುನಾವಣಾ ಪ್ರಾಧಿಕಾರ**

ಸಂಖ್ಯೆ: ಸಚುಅ/ಚುನಾವಣೆ/ರ್‍ಯಾಂಡ್‌ಮೇಜೇಷನ್/13/2016

3ನೇ ಮಹಡಿ, ಶಾಂತಿನಗರ ಟಿ.ಟಿ.ಎಂ.ಸಿ. 'ಎ' ಬ್ಲಾಕ್,
ಶಾಂತಿನಗರ, ಬೆಂಗಳೂರು.
ದಿನಾಂಕ 17.03.2016

**ಸುತ್ತೋಲೆ**

**ವಿಷಯ:** ಪ್ರಾಥಮಿಕ ಸಹಕಾರ ಸಂಘಗಳ/ಸಹಕಾರಿಗಳ ಚುನಾವಣೆಯನ್ನು ಪ್ರಾಧಿಕಾರ ದಿಂದ ಹೊರಡಿಸಿರುವ ಅಧಿಸೂಚನೆಯಲ್ಲಿ ನಮೂದಿಸಿರುವ ದಿನಾಂಕಗಳನ್ನು ಹೊರತುಪಡಿಸಿ ಬೇರೆ ದಿನಾಂಕಗಳಲ್ಲಿ ಚುನಾವಣೆಯನ್ನು ನಡೆಸುವ ಪೂರ್ವ ದಲ್ಲಿ ಪ್ರಾಧಿಕಾರದ ಅನುಮೋದನೆ ಪಡೆಯದೆ ಚುನಾವಣಾಧಿಕಾರಿ ಹಂತ ದಲ್ಲಿಯೇ ಚುನಾವಣೆ ದಿನಾಂಕಗಳನ್ನು ಮಾರ್ಪಡಿಸುತ್ತಿರುವ ಬಗ್ಗೆ ಮತ್ತು ಪ್ರಾಧಿಕಾರದ ಸುತ್ತೋಲೆ ಮತ್ತು ಆದೇಶಗಳ ಸೂಚನೆ ಮತ್ತು ನಿರ್ದೇಶನ ಗಳನ್ನು ಅನುಷ್ಠಾನಗೊಳಸದಿರುವ ಬಗ್ಗೆ.

**ಉಲ್ಲೇಖ:**
1. ಪ್ರಾಧಿಕಾರದ ಸುತ್ತೋಲೆ ಸಂಖ್ಯೆ:ಸಚುಪ್ರಾ/ಮ.ಪಟ್ಟಿ/ಪರಿಷ್ಕರಣೆ-2/2016, ದಿನಾಂಕ:14-12-2015
2. ಪ್ರಾಧಿಕಾರದ ಅಧಿಸೂಚನೆ ಸಂ:ಸಚುಅ/ಚುನಾವಣೆ/ಜನವರಿ-ಜೂನ್/ 01/2016 ದಿನಾಂಕ 18-12-2015.
3. ಸಹಕಾರ ಚುನಾವಣಾ ಪ್ರಾಧಿಕಾರದ ಪತ್ರ ಸಂಖ್ಯೆ:ಸಚುಪ್ರಾ/ಚುಅನೇ/ 03/2016 ದಿನಾಂಕ 06-02-2016.

********

ಉಲ್ಲೇಖ (1)ರ ಸುತ್ತೋಲೆಯಂತೆ ಸಹಕಾರ ಸಂಘಗಳ ನಿಯಮ 1960 ನಿಯಮ 13(ಡಿ)(1)ರಂತೆ ತಮ್ಮ ಕಾರ್ಯವ್ಯಾಪ್ತಿಯಲ್ಲಿ ಬರುವ ಎಲ್ಲಾ ಸಹಕಾರ ಸಂಘಗಳ / ಸಹಕಾರಿಗಳ ಆಡಳಿತ ಮಂಡಲಿಗಳ ಪದಾವಧಿ ಮುಕ್ತಾಯವಾಗಲಿರುವ ಚುನಾವಣೆಗಳು ಸನ್ನಿಹಿತವಾಗಲಿರುವ ಸಹಕಾರ ಸಂಘಗಳ/ಸಹಕಾರಿಗಳ ಕ್ರೋಢೀಕೃತ ಪಟ್ಟಿಯನ್ನು ಪ್ರಾಧಿಕಾರಕ್ಕೆ ಕಳುಹಿಸದೆ, ಚುನಾವಣೆಗೆ ಬಾಕಿ ಇರುವ ಸಹಕಾರ ಸಂಘಗಳಿಗೆ / ಸಹಕಾರಿಗಳಿಗೆ ಪ್ರಾಧಿಕಾರದ ಉಲ್ಲೇಖಿತ (2)ರ ಅಧಿಸೂಚನೆಯಂತೆ ರ್‍ಯಾಂಡ್‌ಮೈಜೇಷನ್ (Randomization) ಪದ್ಧತಿಯನ್ನು ಅನುಸರಿಸದೆ ರಿಟರ್ನಿಂಗ್ ಆಫೀಸರ್‌ಗಳನ್ನು ನೇಮಕಾತಿ ಮಾಡುತ್ತಿರುವುದು ಪ್ರಾಧಿಕಾರದ ಗಮನಕ್ಕೆ ಬಂದಿರುತ್ತದೆ.

ಮೇಲಿನ ಕಂಡಿಕೆಯಲ್ಲಿನ ಅಂಶವನ್ನು ಪ್ರಾಧಿಕಾರವು ಗಮನಿಸಿದ ನಂತರ ಉಲ್ಲೇಖ (3)ರಲ್ಲಿ ಪ್ರಾಥಮಿಕ ಹಂತದ ಸಹಕಾರ ಸಂಘಗಳ/ಸಹಕಾರಿಗಳ ಎಲ್ಲ ಸಕ್ಷಮ ನಿಬಂಧಕರುಗಳಿಗೆ ವಿಳಾಸಿಸಿ ಬರೆದಿರುವ ಪತ್ರದಲ್ಲಿ ತಪ್ಪದೇ ರ್‍ಯಾಂಡ್‌ಮೈಜೇಷನ್ (Randomization) ರೀತ್ಯಾ ಪಟ್ಟಿ ತಯಾರಿಸಿ ಪ್ರಾಧಿಕಾರದ ಅನುಮೋದನೆ ಪಡೆದ ನಂತರವೇ ರಿಟರ್ನಿಂಗ್ ಆಫೀಸರ್ ನೇಮಕ ಮಾಡತಕ್ಕದ್ದೆಂದು ಹಾಗೂ ಚುನಾವಣೆಗೆ ಬಾಕಿ ಇರುವ ರಿಟರ್ನಿಂಗ್ ಆಫೀಸರ್ ನೇಮಕಾತಿ ಮಾಡಲಿರುವ ಸಂಘಗಳ ಪಟ್ಟಿ ಹಾಗೂ ರಿಟರ್ನಿಂಗ್ ಆಫೀಸರ್‌ಗಳ ಪಟ್ಟಿ ಕೂಡಲೇ ಕಳುಹಿಸಲು ಸಹ ತಿಳಿಸಲಾಗಿದೆ. ಆದರೆ ಇದುವರೆಗೆ ಈ ಬಗ್ಗೆ ಕೆಲವು ಸಕ್ಷಮ ನಿಬಂಧಕರುಗಳನ್ನು ಹೊರತುಪಡಿಸಿ ಉಳಿದ ಯಾವುದೇ ಸಕ್ಷಮ ನಿಬಂಧಕರುಗಳು ಈ ಕ್ರಮವನ್ನು ಅನುಸರಿಸದೇ ಇರುವುದನ್ನು ಪ್ರಾಧಿಕಾರವು ಗಂಭೀರವಾಗಿ ಪರಿಗಣಿಸಿರುತ್ತದೆ.

ಅದೇ ರೀತಿಯಲ್ಲಿ ಎಲ್ಲಾ ಕಾರ್ಯವ್ಯಾಪ್ತಿಯ ಪ್ರಾಥಮಿಕ ಹಂತದ ಸಹಕಾರ ಸಂಘಗಳ / ಸಹಕಾರಿಗಳ ಸಕ್ಷಮ ನಿಬಂಧಕರುಗಳು ದಿನಾಂಕ: 18/12/2015ರ ಅಧಿಸೂಚನೆಯಲ್ಲಿ ಸಂಘಗಳ/ಸಹಕಾರಿಗಳ ಪದಾವಧಿ ಮುಕ್ತಾಯವಾಗಲಿರುವ ದಿನಾಂಕಗಳಿಗೆ ಅನುಗುಣವಾಗಿ ಪೂರ್ವಭಾವಿಯಾಗಿ ಚುನಾವಣೆಗಳನ್ನು ನಡೆಸಲು ಚುನಾವಾಣಾ ದಿನಾಂಕಗಳನ್ನು ಗೊತ್ತುಪಡಿಸಲಾಗಿರುತ್ತದೆ. ಆದರೆ ಅದರಂತೆ ಚುನಾವಣೆಗಳನ್ನು ನಡೆಸಲು ಸಾಧ್ಯವಾಗದಿರುವ ಸಹಕಾರ ಸಂಘಗಳ/ಸಹಕಾರಿಗಳ ದಿನಾಂಕಗಳನ್ನು ಕಾರ್ಯವ್ಯಾಪ್ತಿಯ ಸಕ್ಷಮ ನಿಬಂಧಕರುಗಳೇ ದಿನಾಂಕಗಳನ್ನು ಮಾರ್ಪಡಿಸಿಕೊಂಡು ಸದರಿ ದಿನಾಂಕಗಳಿಗೆ ಪ್ರಾಧಿಕಾರದ ಅನುಮೋದನೆ ಪಡೆಯದೆ ಚುನಾವಣೆಗಳನ್ನು ನಡೆಸುತ್ತಿರುವುದು ಪ್ರಾಧಿಕಾರದ ಗಮನಕ್ಕೆ ಬಂಧಿರುತ್ತದೆ. ಈ ಅಂಶವನ್ನು ಪ್ರಾಧಿಕಾರವು ಗಂಭೀರವಾಗಿ ಪರಿಗಣಿಸಿದೆ.

ಮೇಲಿನ ಕಂಡಿಕೆಗಳಲ್ಲಿ ವಿವರಿಸಿರುವ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಪ್ರಾಥಮಿಕ ಹಂತದ ಎಲ್ಲಾ ಕಾರ್ಯವ್ಯಾಪ್ತಿಯ ಸಕ್ಷಮ ನಿಬಂಧಕರುಗಳು ಈ ಕೆಳಕಂಡ ಪ್ರಾಧಿಕಾರದ ಸೂಚನೆಗಳನ್ನು ತಪ್ಪದೇ ಅನುಸರಿಸತಕ್ಕದ್ದು.

1. ಎಲ್ಲಾ ಕಾರ್ಯವ್ಯಾಪ್ತಿಯ ಪ್ರಾಥಮಿಕ ಹಂತದ ಸಹಕಾರ ಸಂಘಗಳ/ಸಹಕಾರಿಗಳ ಸಕ್ಷಮ ನಿಬಂಧಕರುಗಳು ನಿಯಮಾನಾಸಾರ ರ್‍ಯಾಂಡ್‌ಮೈಜೇಷನ್ (Randomization) ಪದ್ಧತಿಯನ್ನು ಅಳವಡಿಸಿ ಚುನಾವಣೆಗೆ ಬಾಕಿ ಇರುವ ಸಹಕಾರ ಸಂಘಗಳ/ಸಹಕಾರಿಗಳ ಪಟ್ಟಿಯನ್ನು ಮತ್ತು ನೇಮಕಾತಿ ಮಾಡಬೇಕೆಂದಿರುವ ರಿಟರ್ನಿಂಗ್ ಆಫೀಸರ್‌ಗಳ ಪಟ್ಟಿಯನ್ನು ಪ್ರಾಧಿಕಾರಕ್ಕೆ ಕಳುಹಿಸಿ ಅನುಮೋದನೆ ಪಡೆದ ನಂತರವೇ ರಿಟರ್ನಿಂಗ್ ಆಫೀಸರ್‌ಗಳನ್ನು ನೇಮಕಾತಿ ಮಾಡತಕ್ಕದ್ದು.

2 ಚುನಾವಣೆಗೆ ಬಾಕಿ ಇರುವ ಎಲ್ಲಾ ರೀತಿಯ ಪ್ರಾಥಮಿಕ ಹಂತದ ಸಹಕಾರ ಸಂಘಗಳ/ ಸಹಕಾರಿಗಳ ಎಲ್ಲಾ ಹಂತದ ಕಾರ್ಯವ್ಯಾಪ್ತಿಯ ಸಕ್ಷಮ ನಿಬಂಧಕರುಗಳು ಚುನಾವಣೆಗೆ ಬಾಕಿ ಇರುವ ಸಹಕಾರ ಸಂಘಗಳ/ಸಹಕಾರಿಗಳ, ಕರ್ನಾಟಕ ಸಹಕಾರ ಸಂಘಗಳ ನಿಯಮ 1960 ನಿಯಮ 13(ಡಿ)(1)ರ ನಮೂನೆ ಮಾಹಿತಿಯನ್ನು ಮತ್ತು ಸಹಕಾರ ಸಂಘಗಳ/ಸಹಕಾರಿಗಳವಾರು ಕ್ರೋಢೀಕೃತ ಪಟ್ಟಿಯನ್ನು ನಿಯಮಾನುಸಾರ ತಪ್ಪದೇ ಕಳುಹಿಸಿಕೊಡತಕ್ಕದ್ದು.

3 ಪ್ರಾಧಿಕಾರದ ಅಧಿಸೂಚನೆಯಂತೆ ಎಲ್ಲಾ ರೀತಿಯ ಪ್ರಾಥಮಿಕ ಹಂತದ ಸಹಕಾರ ಸಂಘಗಳ/ ಸಹಕಾರಿಗಳ ಎಲ್ಲಾ ಹಂತದ ಕಾರ್ಯವ್ಯಾಪ್ತಿಯ ಸಕ್ಷಮ ನಿಬಂಧಕರುಗಳು ಪ್ರಾಧಿಕಾರದ ಅಧಿಸೂಚನೆಯಲ್ಲಿ ಗೊತ್ತುಪಡಿಸಿದ ದಿನಾಂಕಗಳನ್ನು ಮಾರ್ಪಡಿಸಿ ಬೇರೆ ದಿನಾಂಕಗಳಲ್ಲಿ

.... 3

ಚುನಾವಣೆಯನ್ನು ನಡೆಸಬೇಕಾದ ಸಂದರ್ಭಗಳು ಇದ್ದಲ್ಲಿ ಇವುಗಳ ಬಗ್ಗೆ ಸಕಾರಣಗಳನ್ನು ನೀಡಿ ಪ್ರಾಧಿಕಾರದ ಅನುಮೋದನೆ ಪಡೆದ ನಂತರವೇ ಸಂಘದ ಪದಾವಧಿಯೊಳಗೆ ಚುನಾವಣೆಗಳನ್ನು ನಡೆಸತಕ್ಕದ್ದಾಗಿರುತ್ತದೆ.

ಮೇಲಿನ ಸೂಚನೆಗಳನ್ನು ತಕ್ಷಣ ಅನುಷ್ಠಾನಗೊಳಿಸಲು ಕ್ರಮಕೈಗೊಂಡು ಪ್ರಾಧಿಕಾರಕ್ಕೆ ವರದಿಸತಕ್ಕದ್ದು. ಈ ಸೂಚನೆಗಳನ್ನು ಆದ್ಯತೆ ಮೇರೆಗೆ ಪರಿಗಣಿಸತಕ್ಕದ್ದು.

(ಎನ್.ಸಿ.ಮುನಿಯಪ್ಪ)
ಆಯುಕ್ತರು
ಸಹಕಾರ ಚುನಾವಣಾ ಪ್ರಾಧಿಕಾರ

ಇವರಿಗೆ

1. ಸಹಕಾರ ಸಂಘಗಳ ಅಪರ ನಿಬಂಧಕರು, (ಪತ್ತು), (ಕೈಗಾರಿಕೆ ಮತ್ತು ಹೈನುಗಾರಿಕೆ), (ವಸತಿ ಮತ್ತು ಇತರೆ), (ಬಳಕೆ ಮತ್ತು ಮಾರಾಟ), ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು
2. ರಾಜ್ಯದ ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರು,
3. ಸಹಕಾರ ಸಂಘಗಳ ಜಂಟಿ ನಿಬಂಧಕರು (ಪಟ್ಟಣ ಬ್ಯಾಂಕುಗಳ ವಿಭಾಗ) ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು.
4. ಸಹಕಾರ ಸಂಘಗಳ ಜಂಟಿ ನಿಬಂಧಕರು(ಕಾನೂನು ಕೋಶ), ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು
5. ಸಹಕಾರ ಸಂಘಗಳ ಜಂಟಿ ನಿಬಂಧಕರು, ಕಾಡಾ, ಬೆಳಗಾವಿ, ಕಲಬುರಗಿ ಮತ್ತು ಮೈಸೂರು.
6. ರಾಜ್ಯದ ಎಲ್ಲಾ ಜಿಲ್ಲೆಗಳ ಸಹಕಾರ ಸಂಘಗಳ ಉಪನಿಬಂಧಕರು,
7. ರಾಜ್ಯದ ಎಲ್ಲಾ ಉಪವಿಭಾಗಗಳ ಸಹಕಾರ ಸಂಘಗಳ ಸಹಾಯಕ ನಿಬಂಧಕರುಗಳು,